**ದಿನಾಂಕ:21.06.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಯರ ಪರ ಶ್ರೀ ಹೆಚ್ ಟಿ ವಕೀಲರಿಂದಃ-

ನನ್ನ ತಂದೆ, ಅಜ್ಜ, ಮುತ್ತಜ್ಜ ಮತ್ತು ಪೂರ್ವಿಕರೆಲ್ಲರು ಹುಲ್ಲೇಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದರು. ದಾವಾ ಆಸ್ತಿಯನ್ನು ನಾನು, ನನ್ನ ತಮ್ಮ ಉಳುಮೆ ಮಾಡುತ್ತಿದ್ದೇವೆ, ನನ್ನ ಬೇರೆ ಸಹೋದರರಿಗೆ ಬೇರೆ ಆಸ್ತಿ ನೀಡಲಾಗಿರುತ್ತದೆ. ದಾವಾ ಆಸ್ತಿಯಾದ ಒಟ್ಟು 7 ಎಕರೆ 21 ಗುಂಟೆ ಪೈಕಿ ನಾನು ಮತ್ತು ನನ್ನ ತಮ್ಮ ಸಮ ಭಾಗ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದು ಉಳುಮೆ ಮಾಡುತ್ತಿದ್ದೇವೆ. ನಾನು ಉಳುಮೆ ಮಾಡುತ್ತಿರುವ ಜಮೀನಿನ ವಿಸ್ತೀರ್ಣ ನಿಖರವಾಗಿ ಹೇಳಲು ಬರುವುದಿಲ್ಲ ಆದರೆ ನಾನು 3 ಎಕರೆ ಚಿಲ್ಲರೆ ಜಮೀನನ್ನು ಉಳುಮೆ ಮಾಡುತ್ತಿದ್ದೇನೆ.

ನಾನು ಉಳುಮೆ ಮಾಡುತ್ತಿರುವ ಜಮೀನಿನ ಪಶ್ಚಿಮಕ್ಕೆ ದಾರಿ, ಉತ್ತರಕ್ಕೆ ಕುಮಾರಪ್ಪ ಮತ್ತು ಹನುಮಂತಪ್ಪ ರವರ ಜಮೀನು, ಪೂರ್ವಕ್ಕೆ ತಿಮ್ಮರಾಯಪ್ಪ ಮತ್ತು ಕರಿಬಸಪ್ಪ ರವರ ಜಮೀನು, ದಕ್ಷಿಣಕ್ಕೆ ರುದ್ರಮ್ಮ ಮತ್ತು ಅವರ ಮಕ್ಕಳ ಜಮೀನು ಇದೆ. ಅದೇ ರೀತಿ ನನ್ನ ತಮ್ಮ ಉಳುಮೆ ಮಾಡುತ್ತಿರುವ ಜಮೀನಿನ ಪೂರ್ವಕ್ಕೆ ಕರಿಬಸಪ್ಪ ಮತ್ತು ತಿಮ್ಮರಾಯಪ್ಪ, ದಕ್ಷಿಣಕ್ಕೆ ರುದ್ರಮ್ಮ ಮತ್ತು ಮಕ್ಕಳ ಜಮೀನು, ಪಶ್ಚಿಮಕ್ಕೆ ದಾರಿ, ಉತ್ತರಕ್ಕೆ ಹನುಮಂತಪ್ಪ ಮತ್ತು ಕುಮಾರಪ್ಪ ರವರ ಜಮೀನು.

ದಾವಾ ಸ್ವತ್ತನ್ನು ನಾನು ಮತ್ತು ನನ್ನ ತಮ್ಮ ಸಾಗುವಳಿ ಮಾಡುತ್ತಿದ್ದೇವೆ ಎಂದು ಈ ದಾವೆಯ ವಾದ ಪತ್ರದಲ್ಲಿ ಹೇಳಿರುತ್ತೇವೆ. ದಾವಾ ಆಸ್ತಿಯಲ್ಲಿ ನನ್ನ ಉಳಿದ 3 ಜನ ಸಹೋದರರಿಗೂ ಸಹಃ ಹಕ್ಕು ಇದೆ. ನನ್ನ ಉಳಿದ 3 ಜನ ಸಹೋದರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲವೆಂದರೆ ಸರಿ. ನಮ್ಮ ಕುಟುಂಬದಲ್ಲಿ ವಿಭಾಗವಾಗುವ ಪೂರ್ವದಲ್ಲಿ ಖಾತೆಯು ತಿಮ್ಮ ಬಿನ್ ಓಬಳಿ ರವರ ಹೆಸರಿನಲ್ಲಿ ಇತ್ತು. ತಿಮ್ಮ ಬಿನ್ ಓಬಳಿ ಹೆಸರಿನಲ್ಲಿ ಸರ್ವೆ ನಂ.161/1, 66, 48 ರ ಖಾತೆ ಇತ್ತು. ಈಗಲೂ ಸಹಃ ಅವರ ಹೆಸರಿನಲ್ಲಿಯೇ ಖಾತೆ ಇವೆ. ದಾವಾ ಆಸ್ತಿಯನ್ನು ನನ್ನ ತಂದೆಯ ಅಥಾವ ನನ್ನ ಕಾಲದಲ್ಲಿ ಅಳತೆ ಮಾಡಿಸಿರುವುದಿಲ್ಲ. ದಾವಾ ಆಸ್ತಿಯ ಹದ್ದು ಬಸ್ತು ಸರ್ವೆ ಮಾಡಿಸಿರುವುದಿಲ್ಲ. ಈ ದಾವೆ ದಾಖಲು ಮಾಡಿದಾಗ ದಾವಾ ಆಸ್ತಿಯಲ್ಲಿ ಮೆಕ್ಕೆ ಜೋಳ

ಮತ್ತು ಹತ್ತಿ ಬೆಳೆ ಇತ್ತು. ಸದರಿ ಬೆಳೆ ಬೆಳೆದಿದ್ದ ಬಗ್ಗೆ ಈ ದಾವೆಯಲ್ಲಿ ನಮೂದು ಮಾಡಿರುವುದಿಲ್ಲ.

ಪ್ರತಿವಾದಿಗಳೆಲ್ಲರು ಹುಲ್ಲೆಗ್ರಾಮದ ವಾಸಿಗಳು ಎಂದರೆ ಸರಿ. ಪ್ರತಿವಾದಿಗಳೆಲ್ಲರು ಒಂದೇ ಕುಟುಂಬದವರು, ಅಣ್ಣ-ತಮ್ಮಂದಿರು ಅವರು ಈಗ ಬೇರೆ ಬೇರೆ ವಾಸವಾಗಿರುತ್ತಾರೆ. ಪ್ರತಿವಾದಿಗಳು ಹನುಮಣ್ಣ, ಗೊಟ್ಟಜ್ಜ ಮತ್ತು ಗುಡ್ಡದಪ್ಪ ರವರ ಮನೆಯ ಸದಸ್ಯರು ಎಂದರೆ ಸರಿ. ಪ್ರತಿವಾದಿಗಳ ಕುಟುಂಬದ ಪೂರ್ವಿಕರ ಬಗ್ಗೆ ಮಾಹಿತಿ ಇಲ್ಲ ಆದರೆ ಅವರ ತಂದೆಯ ಬಗ್ಗೆ ನನಗೆ ಗೊತ್ತಿದೆ. ದಾವಾ ಆಸ್ತಿಯಲ್ಲಿ ನಾನು ಮತ್ತು ನನ್ನ ತಮ್ಮ ಸ್ವಾಧೀನದಲ್ಲಿ ಇರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಮೂರು ಕುಟುಂಬದವರು ಸೇರಿಕೊಂಡು ಪಾಲು ಮಾಡಿಕೊಂಡು ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ನಮಗೆ ದಾವಾ ಆಸ್ತಿಯಲ್ಲಿ ಇಷ್ಟು ಜಾಗ ಬರಬೇಕು ಎಂದು ಹೇಳಿದ್ದರ ಮೇರೆಗೆ ಸುಮಾರು 15 ದಿನಗಳ ಹಿಂದೆ ನಾನು ಎಸ್ ಪಿ, ಚಿಕ್ಕಮಗಳೂರು ರವರಿಗೆ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಬೀರೂರು ಪೊಲೀಸ್ ಠಾಣೆಗೆ ದೂರು ನೀಡಿರುವುದಿಲ್ಲ. ನೇರವಾಗಿ ಎಸ್ ಪಿ ರವರಿಗೆ ದೂರು ನೀಡಿರುತ್ತೇನೆ. ಈ ಸಂಬಂಧವಾಗಿ ಬೀರೂರು ಪೊಲೀಸರು ನನ್ನನ್ನು ಮತ್ತು ಪ್ರತಿವಾದಿಗಳನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪೊಲೀಸರು ಸಿವಿಲ್ ದಾವೆಯಾದ ಕಾರಣ ನೀವು ನ್ಯಾಯಾಲಯದಲ್ಲಿ ಬಗೆಹರಿಸಿಕೊಂಡು ಬನ್ನಿ ಎಂದು ತಿಳಿಸಿದರು. ಪೊಲೀಸರು ನನಗೆ ಪ್ರತಿವಾದಿಗಳು ಸ್ವಾಧೀನ ಇರುವ ಆಸ್ತಿಗೆ ನಾನು ಹೋಗಬಾರದು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಆ ದಿನ ನನ್ನ ಹೇಳಿಕೆ ಪಡೆದುಕೊಂಡರು. ಸದರಿ ಹೇಳಿಕೆಯಲ್ಲಿ ನಾನು ಪ್ರತಿವಾದಿಗಳ ಸ್ವಾಧೀನಕ್ಕೆ ತಂಟೆ ತಕರಾರು ಮಾಡುವುದಿಲ್ಲ ಸದರಿ ಜಮೀನಿಗೆ ಹೋಗುವುದಿಲ್ಲವೆಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ, ಪ್ರತಿವಾದಿಗಳೆ ಆ ರೀತಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿಗಳು ಈರಾಪುರ ಗ್ರಾಮದಿಂದ ಬಂದು ಹುಲ್ಲೆಹಳ್ಳಿ ಗ್ರಾಮದಲ್ಲಿ ನೆಲೆಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ನಾವು ಈರಾಪುರದಿಂದ

ಬಂದು ನೆಲೆಸಿರುತ್ತೇವೆ ಎಂದು ನುಡಿಯುತ್ತಾರೆ. ನಾವು ಅಣ್ಣ-ತಮ್ಮಂದಿರು ಆಸ್ತಿ ವಿಭಾಗ ಮಾಡಿಕೊಂಡ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ತಂದೆಗೆ ಅಣ್ಣ-ತಮ್ಮಂದಿರು ಹಾಗೂ ಅಕ್ಕ-ತಂಗಿಯರು ಯಾರು ಇರಲಿಲ್ಲ. ಪ್ರತಿವಾದಿಗಳ ಮೂಲ ಪುರುಷ ತಿಮ್ಮ ಬಿನ್ ಓಬಳಿ ಎಂದರೆ ಸರಿಯಲ್ಲ. ತಿಮ್ಮ ಬಿನ್ ಓಬಳಿ ರವರು ನನ್ನ ಅಜ್ಜ. ಪ್ರತಿವಾದಿಗಳ ಅಜ್ಜನ ಹೆಸರಿನಲ್ಲಿ ಇರುವ ಖಾತೆಯನ್ನು ನಾವು ರೆವಿನ್ಯೂ ಅಧಿಕಾರಿಗಳೊಂದಿಗೆ ಷರಿಕ್ಕಾಗಿ ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈವತ್ತಿಗೂ ಸಹಃ ಪ್ರತಿವಾದಿಗಳೆ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆ ಸೃಷ್ಟಿಸಿ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳೆ ಸ್ವಾಧೀನದಲ್ಲಿ ಇರುವುದರಿಂದ ಅವರು ನಮಗೆ ತಂಟೆತಕರಾರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲೆಂದೇ ನಾನು ವಿನಾ ಕಾರಣ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿನ ಅಂಶಗಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮಾಹಿತಿಯನ್ನು ನಮ್ಮ ವಕೀಲರು ನೀಡಿರುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.